ಶ್ರೀ ವೈ. ರಾಮಕೃಷ್ಣ : ನಾನು ಕೇಳಿದ್ದುದು 4 ಪ್ರಶ್ನೆಗಳು, ಇನ್ನೂ ಮೂರಕ್ಕೆ ಉತ್ತರ ಬಂದಿಲ್ಲ. ಈ ರೀತಿ ಪಾರ್ಟಿ ಬೈ ಪಾರ್ಟಿ ಏತಕ್ಕೆ?.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಅವರು ನಮ್ಮ ಬಹಳ ಹಳೆಯ ಹಿರಿಯ ಸ್ನೇಹಿತರು. ಆದ್ದರಿಂದ ಮಾತನಾಡುತ್ತಾ ಇದ್ದಾರೆ. ನನ್ನ ಇಲಾಖೆಗೆ ಸಂಬಂಧಪಟ್ಟ ಹಾಗೆ ಉತ್ತರಗಳು ಬಂದಿದೆ, ಉತ್ತರಗಳನ್ನು ಕೊಟ್ಟಿದ್ದೇವೆ. ಅದರಲ್ಲಿ ಕಂದಾಯ ಇಲಾಖೆಗೆ ಮತ್ತು ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟದ್ದು ಇದೆ. ಏಕೆಂದರೆ ಮತ್ತೊಂದು ಹಕ್ಕು ಚ್ಯುತಿ ಆಗಬಾರದು ಎಂದು ನೋಡಿ ಕೊಟ್ಟಿದ್ದೇನೆ. ಕಳೆದ ವಾರ ಈ ಪ್ರಶ್ನೆಗೆ ಮಾನ್ಯ ರಾಮಕೃಷ್ಣರವರಿಗೆ ಹೇಳಿದಾಗ ನಾನು ಒಂದು ವಾರದೊಳಗಾಗಿ ಉತ್ತರವನ್ನು ಕೊಡುತ್ತೇನೆಂದು ಹೇಳಿದ್ದೆ. ಅದರ ಪ್ರಕಾರವಾಗಿ ರಾಜ್ಯದ ಎಲ್ಲಾ ಪೋಲೀಸ್ ಠಾಣೆಗಳಿಗೂ ಸಂಪರ್ಕ ನಮ್ಮ ಈ ಒಂದು ಇಲಾಖೆ. ಈ ಇಲಾಖೆಯನ್ನು ಮುಖ್ಯಸ್ಥವಾಗಿ ಮಾಡಿ ಆಗಿರತಕ್ಕಂತಹ ದೌರ್ಜನ್ಯಗಳು, ದಾಖಲಾತಿ ಆಗಿರತ್ಕಂತಹ ಕೇಸುಗಳು, ಇದರ ಬಗ್ಗೆ ಮಾಹಿತಿಯನ್ನು ನಾವು ಕೊಟ್ಟಿದ್ದೇ. ಕಂದಾಯ ಇಲಾಖೆ ಮತ್ತು ಸಮಾಜಕಲ್ಯಾಣ ಇಲಾಖೆಗೆ ಎಷ್ಟು ದುಡ್ಡನ್ನು ಕೊಟ್ಟಿದ್ದೇವೆ ಎನ್ನುವ ಬಗ್ಗೆ ಸ್ವಲ್ಪ ಮಾಹಿತಿ ನನಗೆ ಬಂದಿದೆ. ಅದನ್ನು ಬೇಕಾದರೆ ಹೇಳುತ್ತೇನೆ. ಉಳಿದವುಗಳಿಗೆ ಉತ್ತರಗಳನ್ನು ಒದಗಿಸಿದ್ದೇವೆ.

ಶ್ರೀ ವೈ. ರಾಮಕೃಷ್ಣ : ತಮ್ಮ ಉತ್ತರದಲ್ಲಿ 312 ಕೇಸುಗಳ ದಾಖಲಾತಿಯಾಗಿದೆ ಎಂದು ಹೇಳಿದ್ದೀರಿ. ಇದರಲ್ಲಿ ಮೂರು ಜಿಲ್ಲೆಗಳಲ್ಲಿ 30ಕ್ಕೂ ಮೇಲಾಗಿದೆ. ಯಾವುವು ಎಂದರೆ ಬೆಳಗಾಂ, ಬಿಜಾಪುರ ಮತ್ತು ಕೋಲಾರ, ಇವುಗಳನ್ನೆಲ್ಲ ಸೆನ್ಸಿಟೀವ್ ಏರಿಯಾ ಎಂದು ಭಾವಿಸಿ ವಿಶೇಷ ಕಾರ್ಯಕ್ರಮ ಹಾಕಿಕೊಂಡು ದೌರ್ಜನ್ಯಗಳನ್ನು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಪಿ.ಜಿ.ಆರ್. ಸಿಂಧ್ಯ : ಸನ್ಮಾನ್ಯ ಸಭಾಧ್ಯಕ್ಷರೇ, ಹರಿಜನರ ಮೇಲೆ, ದುರ್ಬಲ ವರ್ಗದವರ ಮೇಲೇ ಆಗತಕ್ಕಂಥ ದೌರ್ಜನ್ಯವನ್ನು ತಡೆಗಟ್ಟಲಿಕ್ಕೆ ಎಲ್ಲಾ ರೀತಿಯ ಕ್ರಮಗಳನ್ನು ನಾವು ತೆಗೆದುಕೊಂಡಿದ್ದೇನೆ. ಅನೇಕ ಸಂದರ್ಭಗಳಲ್ಲಿ ಎಸ್.ಪಿ.ಗಳಿಗೆ ನೇರವಾಗಿ ನಾನು ಸೂಚನೆಯನ್ನು ಕೊಟ್ಟಿದ್ದೇನೆ. ಇವತ್ತು ತಮ್ಮ ಮೂಲಕ, ಈ ಸದನದ ಮೂಲಕ ಇಲ್ಲಿ ನನ್ನ ಇಲಾಖೆಯ ಅಧಿಕಾರಿಗಳಿಗೆ ಎಚ್ಚರಿಕೆಯ ರೂಪದಲ್ಲಿ ಏನು ಕೊಟ್ಟಿದ್ದೇನೆಂದರೆ ಏನಾದರೂ ಆದರೆ ಜವಾಬ್ದಾರಿ ನಿಮ್ಮ ಮೇಲೆ, ನೀವೇ ಅದರ ಹೊಣೆ ಎನ್ನತಕ್ಕಂಥ ಮಾತನ್ನು ಹೇಳಿದ್ದೇನೆ. ಸತ್ತವರ ಜೀವವನ್ನು ನಾವು ಕೊಡುವುದಕ್ಕೆ ಆಗುವುದಿಲ್ಲ. ಪರಿಹಾರ ಕೊಡಬಹುದು, ಮನೆ ಕಟ್ಟಿಸಿ ಕೊಡಬಹುದು. ಅದನ್ನು ನಾವು ಮಾಡುತ್ತೇವೆ. ಆದರೆ ಅನೇಕ ಸಂದರ್ಭಗಳಲ್ಲಿ ಇದರ ದುರುಪಯೋಗ ಆಗುತ್ತಿರತಕ್ಕಂಥಾದ್ದು, ಹರಿಜನರನ್ನು ಉಪಯೋಗಿಸಿಕೊಳ್ಳತಕ್ಕಂಥಾದನ್ನು ಸದಾ ನಾನು ಗಮನಿಸಿದ್ದೇನೆ. ಇದು ಬಹಳ ದುಃಖಕರವಾಗಿರತಕ್ಕಂಥ ವಿಚಾರ. ಈ ಸದನದ ಮೂಲಕ ನಾನು ಭರವಸೆಯನ್ನು ಕೊಡುತ್ತೇನೆ. ರಾಜ್ಯದಲ್ಲಿ ಎಲ್ಲೆಲ್ಲಿ ಇಂತಹ ಪ್ರಕರಣಗಳು ನಡೆದಿವೆ ಹಾಗೂ ಪರಿಹಾರದ ಬಗ್ಗೆ ಮನೆ ಕಟ್ಟಿಸಿ ಕೊಡುವುದರ ಬಗ್ಗೆ ಮುಂಜಾಗ್ರತೆ ಬಗ್ಗೆ ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವ ಭರವಸೆಯನ್ನು ಕೊಡುವುದರ ಜೊತೆಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಯಾರು ಇದ್ದಾರೆ ಅವರ ಮೇಲೆ ನೇರವಾದ ಹೊಣೆಯನ್ನು ಹೊರಿಸುತ್ತೇವೆ ಎನ್ನುವುದನ್ನು ನಾವು ಈ ಸಂದರ್ಭದಲ್ಲಿ ಹೇಳುತ್ತೇನೆ.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಸಿ, ಬೈರೇಗೌಡ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೇ, ದಿನಾಂಕ 4-4-95ರಂದು ಲಿಖಿತ ಮೂಲಕ ಉತ್ತರಿಸುವ 11ನೇ ಪಟ್ಟಿಯಲ್ಲಿರುವ 76 ಪ್ರಶ್ನೆಗಳ ಪೈಕಿ 52 ಪ್ರಶ್ನೆಗಳಿಗೆ ಬಂದಿರುವ ಉತ್ತರಗಳನ್ನು ಸದನದ ಮುಂದೆ ಮಂಡಿಸುತ್ತೇನೆ.